

## ರಾಜ್ಯದಲ್ಲಿ 14 ಮಳಿಗೆಗಳು


ಬೆಂಗಳೂರು, ಮೈಸೂರು, ದಾವಣಗೆರೆ, ಚನ್ನಪಟ್ಟಣ, ಹೈದರಾಬಾದ್ ಸಹಿತ 14 ಮಾರಾಟ ಮಳಿಗೆಗಳನ್ನು ಕೆಎಸ್‌ಐಸಿ ಹೊಂದಿದೆ. ಬೆಂಗಳೂರಿನಲ್ಲಿ ಆರು (ಎಂ.ಜಿ. ರಸ್ತೆಯ ಜುಬಿಲಿ ಶೋರೂಂ, ಗಾಂಧಿ ಬಜಾರ್, ಮಲ್ಲೇಶ್ವರಂ, ಬಸವೇಶ್ವರ ನಗರ, ಕೆ.ಜಿ. ರಸ್ತೆ, ಡಿ.ವಿ.ಜಿ. ರಸ್ತೆ ಜಯನಗರ) ಮಾರಾಟ ಮಳಿಗೆಗಳಿವೆ. ಮೈಸೂರಿನಲ್ಲಿ ಐದು (ಮೃಗಾಲಯ ಎದುರು, ಯಾತ್ರಿ ನಿವಾಸ್, ಕೆ.ಆರ್.ವೃತ್ತ, ಮಾನಂದವಾಡಿಯ ಫ್ಯಾಕ್ಟರಿ ಆವರಣ) ಮಳಿಗೆಗಳಲ್ಲಿ ಖರೀದಿಗೆ ಅವಕಾಶವಿದೆ. ಉಳಿದಂತೆ ದಾವಣಗೆರೆ, ಚನ್ನಪಟ್ಟಣ, ಬೆಂಗಳೂರಿನ ವಿಮಾನ ನಿಲ್ದಾಣ ಆವರಣದಲ್ಲಿ ಒಂದೊಂದು ಮಳಿಗೆಗಳಿವೆ.



ರೇಷ್ಮೆ ಸೀರೆ ಖರೀದಿಸಲು ಬೆಂಗಳೂರಿನ ಕೆಎಸ್‌ಐಸಿ ಮಳಿಗೆಗೆ ಮುಗಿಬಿದ್ದಿದ್ದ ಮಹಿಳೆಯರು

## ಕೆಎಸ್‌ಐಸಿ ವಾರ್ಷಿಕ ವಹಿವಾಟು

(ತೆರಿಗೆ ನಂತರದ ಲಾಭ)






ಅಪ್ಪಟ ರೇಷ್ಮೆ ಸೀರೆಯಲ್ಲಿ ನಾರಿಯರ ಸೊಬಗು
ಚಿತ್ರ: ಸನಾ ಇಬ್ರಾಹಿಂ

ಮಾ. 26ರ ಸಂಚಿಕೆಯ ಚೆನ್ನುಡಿ **'ಕಿಸೀಲಿಲ್ಲ ಮಸೀಲಿಲ್ಲ ಕುಸೂಗಲ್ ಹಾಳಾಗಿತ್ತಂತ್'** ಕೇಳಿ, **ಬಸವರಾಜ ಸಾದರ** ಅವರ ಧ್ವನಿಯಲ್ಲಿ...

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ನೋಡಿದಾಗ, ಕರುನಾಡಿಗೆ ರೇಷ್ಮೆಯನ್ನು ಪರಿಚಯಿಸಿದ ಹೆಗ್ಗಳಿಕೆ ಟಿಪ್ಪು ಸುಲ್ತಾನ್ ಅವರದ್ದು. ರಾಜ್ಯದಲ್ಲಿ ಸಿಲ್ಕ್ ಫ್ಯಾಕ್ಟರಿಯ ಪಿತಾಮಹ ಎಂದೇ ಟಿಪ್ಪುವನ್ನು ಕರೆಯಲಾಗುತ್ತದೆ. ಮೈಸೂರಲ್ಲಿ ರೇಷ್ಮೆ ಕೃಷಿ ನಡೆಸಿ, ಉದ್ಯಮ ಆರಂಭಿಸುವುದು ಟಿಪ್ಪುವಿನ ಕನಸಾಗಿತ್ತು. ಅದಕ್ಕಾಗಿ 1785ರಲ್ಲಿ ಟಿಪ್ಪು ರೇಷ್ಮೆ ಕೃಷಿಗಾಗಿ ಮೈಸೂರು ರಾಜ್ಯದಿಂದ ಒಂದಷ್ಟು ಮಂದಿಯನ್ನು ಬಂಗಾಳಕ್ಕೆ ಕಳುಹಿಸಿದ್ದು, ರಾಜ್ಯದಲ್ಲಿ ರೇಷ್ಮೆಕೃಷಿಗೆ ಬುನಾದಿಯಾಯಿತು. ರೇಷ್ಮೆಕೃಷಿಯ ಮುಂದುವರಿದ ಭಾಗವಾಗಿ 1860ರಲ್ಲಿ ಬೆಂಗಳೂರಿನಲ್ಲಿ ರೇಷ್ಮೆ ನೂಲು ತೆಗೆಯುವ ಕಾರ್ಖಾನೆ ಆರಂಭಿಸಲಾಯಿತು.

ದೇಶದ ಇತರೆಡೆ ರೇಷ್ಮೆ ಉದ್ಯಮ ಅವನತಿ ಕಾಣುತ್ತಲೇ ಮೈಸೂರು ರೇಷ್ಮೆ ಉನ್ನತಿ ಕಂಡಿತು. ಏರಿಳಿತಗಳ ನಡುವೆ 1912ರಲ್ಲಿ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ರೇಷ್ಮೆ ಜನಪ್ರಿಯಗೊಂಡಿತು. ಯುರೋಪಿಯನ್ ಶೈಲಿಯಿಂದ ಪ್ರೇರಿತರಾಗಿ ಅವರು ಸ್ವಿಟ್ಜರ್ಲೆಂಡ್‌ನಿಂದ ನೇಯ್ಗೆ ಮಗ್ಗಗಳನ್ನು ಆಮದು ಮಾಡಿಕೊಂಡು ರಾಜ ಕುಟುಂಬದ ಬಳಕೆಗಾಗಿ ಮೈಸೂರು ರೇಷ್ಮೆ ಕಾರ್ಖಾನೆಯನ್ನು 1913ರಲ್ಲಿ ಸ್ಥಾಪಿಸಿದರು. ಗ್ರಾಮೀಣ ಅಭಿವೃದ್ಧಿಗೂ ಮೈಸೂರು ರೇಷ್ಮೆ ಮುನ್ನುಡಿ ಬರೆಯಿತು. ನಂತರ ಈ ಕಾರ್ಖಾನೆಯನ್ನು ಕರ್ನಾಟಕ ಸರ್ಕಾರ ಸ್ವಾಧೀನಪಡಿಸಿಕೊಂಡು ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮದ (**Karnataka Silk Industries Corporation–KSIC**) ಅಡಿಯಲ್ಲಿ ತಂದಿತು. ಒಟ್ಟಿನಲ್ಲಿ, ಟಿಪ್ಪು ಸುಲ್ತಾನರ ಕಾಲದಲ್ಲಿ ಆರಂಭವಾದ ರೇಷ್ಮೆ ಕೃಷಿ ತರುವಾಯ ಒಡೆಯರ್ ಅರಸರ ಆಶ್ರಯದಲ್ಲಿ ಕರ್ನಾಟಕ, ಅದರಲ್ಲೂ ಮುಖ್ಯವಾಗಿ ಮೈಸೂರಿನ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಕೇತವಾಗಿ ಬೆಳೆಯಿತು.



ತಿ.ನರಸೀಪುರದ ಕೆಎಸ್‌ಐಸಿ ನೂಲು ತೆಗೆಯುವ ಕಾರ್ಖಾನೆ

ಮೈಸೂರು ಸಿಲ್ಕ್ ಸೀರೆಯ ಪ್ರಸಿದ್ಧಿಯ ತೆರೆಮರೆಯಲ್ಲೊಮ್ಮೆ ಸುತ್ತುಹಾಕೋಣ. ರಾಜ್ಯದಲ್ಲಿ ವಿವಿಧೆಡೆ ಹಿಪ್ಪುನೇರಳೆ ಎಲೆಗಳನ್ನು ಬಳಸಿ ರೇಷ್ಮೆಹುಳಗಳನ್ನು ಬೆಳೆಸಿ ರೇಷ್ಮೆ ಗೂಡುಗಳ ಕೃಷಿ ಮಾಡುವುದು ಗೊತ್ತಿರುವ ಸಂಗತಿ. ಆ ಗೂಡುಗಳಿಗೆ ರಾಮನಗರ ಪ್ರಸಿದ್ಧ ಮಾರುಕಟ್ಟೆಯೂ ಆಗಿದೆ. ರೇಷ್ಮೆ ಸೀರೆ ನೇಯುವ ಕಾರ್ಖಾನೆ ಮೈಸೂರು ಹಾಗೂ ಚನ್ನಪಟ್ಟಣದಲ್ಲಿದೆ. ಗೂಡುಗಳಿಂದ ದಾರಗಳನ್ನು ತೆಗೆದ ನಂತರವೇ ಸೀರೆ ನೇಯಬೇಕು. ರೇಷ್ಮೆ ಗೂಡುಗಳಿಂದ ನೂಲು ತೆಗೆಯುವ ಫ್ಯಾಕ್ಟರಿ ಮೈಸೂರಿನ ತಿ. ನರಸೀಪುರದಲ್ಲಿದೆ. ಕಾವೇರಿ ಮತ್ತು ಕಪಿಲಾ ನದಿ ಸಂಗಮದ ನೀರನ್ನು ಬಳಸಿ ತೆಗೆದ ನೂಲು ಉತ್ಕೃಷ್ಟ ಹೊಳಪು, ಬಲು ಬಾಳಿಕೆ ಬರುವಂಥದ್ದು ಎಂಬ ಮಾತನ್ನು ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮದ ಅಧಿಕಾರಿಗಳೇ ಹೇಳುತ್ತಾರೆ.

ಅಲ್ಲಿನ ಅಧಿಕಾರಿಗಳು ಹೇಳುವಂತೆ ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮದ ವತಿಯಿಂದ ವರ್ಷಕ್ಕೆ 1,10,000 ಮೈಸೂರು ರೇಷ್ಮೆ ಸೀರೆಯನ್ನು ನೇಯಲಾಗುತ್ತಿದೆ. ಬೇಡಿಕೆ ಇರೋದು ಸುಮಾರು 1,25,000 ಸೀರೆಗೆ. ಬೇಡಿಕೆಗೆ ತಕ್ಕುದಾಗಿ ಮೈಸೂರು ಸಿಲ್ಕ್ ಸೀರೆಗಳ ಪೂರೈಕೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬುದು ಅಧಿಕಾರಿಗಳು ನೀಡುವ ಭರವಸೆ. ಮೈಸೂರು ರೇಷ್ಮೆಗೆ ಬಣ್ಣ ಹಾಕುವ ಡೈಯಿಂಗ್ ಅಂಗಡಿಗಳು ಮೈಸೂರು ಮಾತ್ರವಲ್ಲದೆ ಬೆಂಗಳೂರಿನಲ್ಲಿಯೂ ಇವೆ. ಈ ಸೀರೆಗಳಿಗೆ ಮರುಮಾರಾಟದ ಬೆಲೆ ಕೂಡ ಚೆನ್ನಾಗಿದೆ. ಕೆಎಸ್‌ಐಸಿ ವಾರ್ಷಿಕ ವಹಿವಾಟು ಕೂಡ ಏರುಗತಿಯಲ್ಲಿ ಸಾಗಿದೆ. ■